# ಭಾರತದಲ್ಲಿ ಭೂ ಹಿಡುವಳಿ ವ್ಯವಸ್ಥೆ

**ಜಗದೀಶ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ರುದ್ರಗೌಡ ಪಾಟೀಲ ಸರಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ಬೀಳಗಿ.

**DOI: https://doi.org/10.5281/zenodo.17296098**

## ABSTRACT:

ಯಾವುದೇ ಒಂದು ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ನಿರ್ಧರಿಸುವಲ್ಲಿ ಕೃಷಿ ಮತ್ತು ಉದ್ದಿಮೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಭಾರತವು ಹಳ್ಳಿಗಳ ನಾಡು. ಕೃಷಿಯೇ ಇಲ್ಲಿಯ ಜನರ ಜೀವನಾಡಿ, ನಮ್ಮ ಅರ್ಥ ವ್ಯವಸ್ಥೆಯ ಬೆನ್ನೆಲುಬು. ಕೃಷಿಯು ಗ್ರಾಮೀಣ ಜನರ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತದೆ. ಹೀಗೆ ಭೂಮಿಯು ಆರ್ಥಿಕ ಅಭಿವೃದ್ಧಿಗಾಗಿ, ದೇಶದ ಬೆಳವಣಿಗೆಗಾಗಿ ಮತ್ತು ವ್ಯಕ್ತಿಯ ಬದುಕಿಗಾಗಿ ಪ್ರಮುಖವಾಗಿದ್ದು, ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಸಾಮಾನ್ಯ ಅರ್ಥದಲ್ಲಿ ಭೂ ಹಿಡುವಳಿ ಪದ್ಧತಿ ಎಂದರೆ ಸಾಗುವಳಿ ಮಾಡುವ ವ್ಯಕ್ತಿಯು ಹೊಂದಿರುವ ಭೂಮಿ ಮತ್ತು ಅದರ ಬಗೆಗೆ ಅವನ ಹಕ್ಕು ಮತ್ತು ಜವಾಬ್ದಾರಿಯನ್ನು ನಿರ್ಧರಿಸುವ ಪದ್ಧತಿಯಾಗಿದೆ, ಅಂದರೆ ಭೂ ಸ್ವಾಮ್ಯದ ಬಗ್ಗೆ ವ್ಯಕ್ತಿ ಹೊಂದಿರುವ ಅಧಿಕಾರವನ್ನು ಮತ್ತು ಶಾಸನಬದ್ಧವಾದ ಹಕ್ಕನ್ನು ತೋರಿಸಿಕೊಡುತ್ತದೆ. ಭೂ ಒಡೆತನ ಪದ್ಧತಿಯನ್ನು ಭೂ ಹಿಡುವಳಿ ಪದ್ಧತಿ, ಭೂ ಸ್ವಾಮ್ಯ ಪದ್ಧತಿ ಎಂದೂ ಸಹ ಕರೆಯುತ್ತಾರೆ. ಭೂ ಹಿಡುವಳಿ ಪದ್ಧತಿಯನ್ನು ಆಂಗ್ಲ ಭಾಷೆಯಲ್ಲಿ LAND TENURE ಎನ್ನುತ್ತಾರೆ. TENURE ಎಂಬ ಪದವು TENIYO ಎಂಬ ಲ್ಯಾಟಿನ್ ಭಾಷೆಯ ಪದದಿಂದ ಬಂದಿದ್ದು, ಹಿಡಿಯುವುದು, ಇಟ್ಟುಕೊಳ್ಳುವುದು ಎಂಬ ಅರ್ಥವನ್ನು ಹೊಂದಿದೆ.

## KEYWORDS:

ಭೂ ಹಿಡುವಳಿ, ಮಹಾಜನಪದಗಳ, ಜಾಗೀರ್, ಖಾಯಂ ಜಮೀನ್ದಾರಿ, ಅಗ್ರಹಾರ.

### Introduction:

ಭೂ ಒಡೆತನ ಪದ್ಧತಿಯು ಸಾಗುವಳಿ ಮಾಡುವ ವ್ಯಕ್ತಿಯ ಸ್ಥಾನಮಾನವನ್ನು ಮತ್ತು ರಾಜ್ಯದೊಂದಿಗೆ ಅವನ ಸಂಬಂಧವನ್ನು ತಿಳಿಸುತ್ತದೆ. ಒಂದು ವೇಳೆ ನಿಜವಾಗಿ ಸಾಗುವಳಿ ಮಾಡುವ ವ್ಯಕ್ತಿಯು ಭೂ ಮಾಲೀಕನಲ್ಲದಿದ್ದರೆ, ಭೂ ಹಿಡುವಳಿ ಪದ್ಧತಿಯು ಭೂ ಮಾಲೀಕ ಮತ್ತು ನಿಜವಾಗಿ ಸಾಗುವಳಿ ಮಾಡುವ ವ್ಯಕ್ತಿಯ ಸಂಬಂಧವನ್ನು ನಿರ್ಧರಿಸುತ್ತದೆ. ಸಾಗುವಳಿ ಮಾಡುವ ರೈತನ ಭೂಮಿಯನ್ನು ಮಾರಾಟ ಮಾಡಲು ಮತ್ತು ಬದಲಾಯಿಸಲು ಬರುವುದೋ ಇಲ್ಲವೋ ಎಂಬುದನ್ನು ಹಿಡುವಳಿ ಪದ್ಧತಿ ನಿರ್ಧರಿಸುತ್ತದೆ. ಹೀಗೆ ಈ ಪದ್ಧತಿಯು ಸಾಗುವಳಿ ಮಾಡುವ ವ್ಯಕ್ತಿ, ಭೂ ಮಾಲೀಕ ಮತ್ತು ಸರ್ಕಾರದ ಮಧ್ಯದಲ್ಲಿರುವ ಸಂಬಂಧವನ್ನು ತಿಳಿಸುತ್ತದೆ.

ಎಸ್. ಎಮ್. ಶಹಾ ಅವರು "ಆರ್ಥಿಕ ಅಭಿವೃದ್ಧಿ ಅಂಶಗಳನ್ನು ನಿರ್ಧರಿಸುವಲ್ಲಿ ಭೂ ಒಡೆತನ ಪದ್ಧತಿಯು ಅತಿ ಮಹತ್ವದ ಪಾತ್ರ ವಹಿಸುತ್ತದೆ" ಎಂಬ ಹೇಳಿಕೆಯನ್ನು ನೀಡಿದ್ದಾರೆ.

ಆರ್. ಎಸ್. ಶರ್ಮಾ ಅವರು "ಭೂ ಹಿಡುವಳಿ ಎಂದರೆ ಭೂಮಿಯ ಮೇಲೆ ರಾಜ್ಯ, ಮಧ್ಯವರ್ತಿಗಳು ಮತ್ತು ರೈತರ ನಡುವೆ ಇರುವ ಹಕ್ಕು-ಕರ್ತವ್ಯಗಳ ಸಮಗ್ರ ವ್ಯವಸ್ಥೆ" ಎಂದಿದ್ದಾರೆ.

ಬಿ. ಎಚ್. ಬಡೆನ್ ಪಾವೆಲ್ ಅವರ ಪ್ರಕಾರ "ಭೂ ಹಿಡುವಳಿ ಎನ್ನುವುದು ಭೂಮಿಯ ಒಡೆತನ, ಉಪಯೋಗ ಮತ್ತು ಆದಾಯ ಹಂಚಿಕೆ ಕುರಿತು ಇರುವ ಕಾನೂನು ಹಾಗೂ ಪದ್ಧತಿ."

ಭಾರತದ ಯೋಜನಾ ಆಯೋಗವು (1950): "ಭೂ ಹಿಡುವಳಿ ಎಂದರೆ, ರೈತನು ಭೂಮಿಯ ಮೇಲೆ ಹೊಂದಿರುವ ಹಕ್ಕುಗಳು ಹಾಗೂ ಸರ್ಕಾರ ಅಥವಾ ಭೂ ಸ್ವಾಮಿಗೆ ಕಟ್ಟಬೇಕಾದ ಕರ-ಬಾಡಿಗೆ ಕುರಿತ ನಿಯಮಾವಳಿ." ಎಂಬ ವ್ಯಾಖ್ಯಾನವನ್ನು ನೀಡಿದೆ.

ಹೀಗೆ ಭೂ ಹಿಡುವಳಿಯು ಕೃಷಿಗೆ ಆಧಾರವಾಗಿದ್ದು, ರಾಜ್ಯದ ಆದಾಯ ಮೂಲವಾಗಿದ್ದು, ಒಂದು ದೇಶದ ಸಾಮಾಜಿಕ ಸ್ಥಿತಿ, ಆರ್ಥಿಕ ಬದಲಾವಣೆ, ಧಾರ್ಮಿಕ, ಸಾಂಸ್ಕೃತಿಕ ಜೀವನದ ಮೇಲೆ ಪ್ರಭಾವ ಬೀರುತ್ತದೆ.

**ಭಾರತದಲ್ಲಿ ಭೂ ಹಿಡುವಳಿ ಪದ್ಧತಿಯ ಇತಿಹಾಸ**

ಭಾರತದಲ್ಲಿಯ ಭೂ ಒಡೆತನಕ್ಕೆ ಸಂಬಂಧಿಸಿದಂತೆ ವಿವಿಧ ಪದ್ಧತಿಗಳು ಕಂಡುಬರುತ್ತವೆ. ಭಾರತದಲ್ಲಿ ಭೂ ಮಾಲೀಕತ್ವ ಪದ್ಧತಿ ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಒಂದೇ ರೀತಿಯಲ್ಲಿಲ್ಲದಿರುವುದು ತಿಳಿದು ಬರುತ್ತದೆ. ನಮ್ಮ ದೇಶದಲ್ಲಿ ಪ್ರದೇಶದಿಂದ ಪ್ರದೇಶಕ್ಕೆ ಮತ್ತು ಸಾಮ್ರಾಜ್ಯದಿಂದ ಸಾಮ್ರಾಜ್ಯಕ್ಕೆ ಭೂ ಒಡೆತನ ಪದ್ಧತಿಯು ನಿರಂತರವಾಗಿ ಬದಲಾವಣೆ ಹೊಂದುತ್ತಾ ಬಂದಿದೆ. ಭಾರತದಲ್ಲಿನ ಭೂ ಒಡೆತನ ಪದ್ಧತಿಯ ಇತಿಹಾಸವನ್ನು ನಾವು ಮೂರು ಹಂತಗಳಲ್ಲಿ ಅಧ್ಯಯನ ಮಾಡಬಹುದು.

**ಪ್ರಾಚೀನ ಭಾರತದ ಭೂ ಹಿಡುವಳಿ ವ್ಯವಸ್ಥೆ**

ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಭೂ ಒಡೆತನ ಪದ್ಧತಿಯ ಬಗ್ಗೆ ನಮಗೆ ನಿಖರವಾದ ಮಾಹಿತಿಗಳು ದೊರೆಯುವುದಿಲ್ಲ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಈ ಬಗ್ಗೆ ಕೆಲವು ವಿಚಾರಗಳನ್ನು ಹಂಚಿಕೊಂಡಿದ್ದಾನೆ. ಅವನ ಪ್ರಕಾರ ಭೂಮಿಯು ರಾಜನಿಗೆ ಸೇರಿದ್ದು, ಅದನ್ನು ಅವನು ತನಗೆ ತಿಳಿದಂತೆ ವಿತರಿಸುವ ಹಕ್ಕನ್ನು ಹೊಂದಿದ್ದನು, ಹೀಗಾಗಿ ಆಗ ರಾಜನನ್ನು ಭೂಮಿಯ ಒಡೆಯ ಅಥವಾ ಭೂಪಾಲಕ ಅಥವಾ ಭೂಪತಿ ಎಂದು ತಿಳಿಸಲಾಗುತ್ತಿತ್ತು. ಅವನು ತನಗೆ ಸೇವೆ ಸಲ್ಲಿಸಿದ ವ್ಯಕ್ತಿಗಳಿಗೆ ಅಥವಾ ಕುಟುಂಬಗಳಿಗೆ ಭೂಮಿಯನ್ನು ದಾನವಾಗಿ, ಉಂಬಳಿಯಾಗಿ ಅಥವಾ ಅನುಭೋಗಕ್ಕಾಗಿ ಕೊಡಬಹುದಾಗಿತ್ತು. ಕೆಲವೊಂದು ಪ್ರಾಚೀನ ಗ್ರಂಥಗಳ ಪ್ರಕಾರ ಭೂ ಹಿಡುವಳಿ ಪದ್ಧತಿಯು ಸಾಮೂಹಿಕ ಸ್ವರೂಪದಲ್ಲಿತ್ತು, ಅಂದರೆ ಆಸ್ತಿಪಾಸ್ತಿಗಳು ಇಡೀ ಊರಿಗೆ ಸಂಬಂಧಪಟ್ಟಿರುತ್ತಿದ್ದವು. ಭೂ ಹಿಡುವಳಿ ವ್ಯವಸ್ಥೆಯು ಬಹಳ ವೈವಿಧ್ಯಮಯವಾಗಿದ್ದು, ಕಾಲಕಾಲಕ್ಕೆ ಬದಲಾಗುತ್ತಾ ಬಂದಿದೆ. ಇದು ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳ ಪ್ರಕಾರ ರೂಪುಗೊಂಡಿತು.

ವೇದಕಾಲದ ಹಾಗೂ ಮಹಾಜನಪದಗಳ ಕಾಲದಲ್ಲಿ ಭೂ ಹಿಡುವಳಿ ವ್ಯವಸ್ಥೆಯನ್ನು ನೋಡುವುದಾದರೆ ಆದಿಕಾಲದಲ್ಲಿ ಭೂಮಿ ಖಾಸಗಿ ಸ್ವತ್ತು ಎಂಬ ಕಲ್ಪನೆ ಇರಲಿಲ್ಲ. ಭೂಮಿ ಸಮುದಾಯದ (ಕುಲ/ಜನಪದ) ಒಡೆತನದಲ್ಲಿತ್ತು. ಹಳ್ಳಿ, ಕುಲ ಅಥವಾ ಜನಪದ

ನಾಯಕರು ಭೂಮಿಯನ್ನು ಹಂಚಿ ಕೊಡುವ ಅಧಿಕಾರ ಹೊಂದಿದ್ದರು.

ಮೌರ್ಯ ಕಾಲದ ಭೂ ಹಿಡುವಳಿ ವ್ಯವಸ್ಥೆಯಲ್ಲಿ ರಾಜ್ಯನೇ ಭೂಮಿಯ ಒಡೆಯ. ರೈತರು ಭೂಮಿಯಲ್ಲಿ ಕೆಲಸ ಮಾಡುತ್ತಿದ್ದರು, ಅವರು ಬಲಿ, ಭಾಗ ಮತ್ತು ಭೋಗ ಎಂಬ ತೆರಿಗೆಗಳನ್ನು ಪಾವತಿಸಬೇಕಾಗುತ್ತಿತ್ತು. ಭೂಮಿಯ ಖಾಸಗಿ ಸ್ವತ್ತು ಅಸ್ತಿತ್ವದಲ್ಲಿದ್ದರೂ, ರಾಜ್ಯದ ಮೇಲ್ವಿಚಾರಣೆಯೇ ಹೆಚ್ಚು.

ಗುಪ್ತರ ಕಾಲದಲ್ಲಿ ಭೂ ಹಿಡುವಳಿ ವ್ಯವಸ್ಥೆಯಲ್ಲಿ ಅಗ್ರಹಾರ (ಬ್ರಹ್ಮದೇಯ) ಪದ್ಧತಿ ಪ್ರಾರಂಭವಾಯಿತು. ಬ್ರಾಹ್ಮಣರಿಗೆ ಕೃಷಿ ಭೂಮಿಯನ್ನು ಉಚಿತವಾಗಿ ದಾನವಾಗಿ ನೀಡಲಾಗುತ್ತಿತ್ತು. ದೇವಾಲಯಗಳಿಗೆ ದಾನವಾಗಿ ಭೂಮಿ ಕೊಡುವುದು ಪ್ರಾರಂಭವಾಯಿತು. ನಂತರದಲ್ಲಿ ಗುಪ್ತರ ಕಾಲದಲ್ಲಿಯೇ ಭಾರತದಲ್ಲಿ ಉಳಿದ ಮಾನ್ಯ ಪದ್ಧತಿ ಜಾರಿಗೆ ಬಂದಿದ್ದನ್ನು ನಾವು ಇಲ್ಲಿ ತಿಳಿಯಬಹುದು.

**ಮಧ್ಯಕಾಲೀನ ಭಾರತದ ಭೂ ಹಿಡುವಳಿ ವ್ಯವಸ್ಥೆ**

ಮಧ್ಯಕಾಲೀನ ಭಾರತದಲ್ಲಿ ದೆಹಲಿ ಸುಲ್ತಾನರ ಮತ್ತು ಮೊಘಲರ ಕಾಲದಲ್ಲಿ ಭೂ ಒಡೆತನ ಪದ್ಧತಿಯು ಹೊಸ ರೂಪದಲ್ಲಿ ಅಸ್ತಿತ್ವಕ್ಕೆ ಬಂದಿತು. ದೆಹಲಿ ಸುಲ್ತಾನರ ಕಾಲದಲ್ಲಿ ಸುಲ್ತಾನನೇ ಭೂಮಿಯ ಮೇಲೆ ಸಂಪೂರ್ಣ ಹಕ್ಕನ್ನು ಹೊಂದಿದ್ದು, ಭೂಮಿಯಿಂದ ಸಂಗ್ರಹವಾಗುವ ಆದಾಯವೇ ರಾಜ್ಯದ ಪ್ರಮುಖ ಆರ್ಥಿಕ ನೆಲೆಯಾಯಿತು. ಇವರ ಕಾಲದಲ್ಲಿ ಪ್ರಮುಖವಾಗಿ ಇಕ್ತಾ ಪದ್ಧತಿ ಜಾರಿಯಲ್ಲಿತ್ತು. ಇದನ್ನು ಗುಲಾಮಿ ಸಂತತಿಯ ಸುಲ್ತಾನ ಇಲ್ತುಮಿಷ ಜಾರಿಗೆ ತಂದನು. ಸುಲ್ತಾನ ತನ್ನ ಸೈನಿಕರು ಮತ್ತು ಅಧಿಕಾರಿಗಳಿಗೆ ಇಕ್ತಾ (ಜಮೀನು/ಆದಾಯ ಹಕ್ಕು) ನೀಡುತ್ತಿದ್ದನು. ಇವರನ್ನು ಮುಕ್ತಿ, ಇಕ್ತಾದಾರ್ ಎಂದು ಕರೆಯಲಾಗುತ್ತಿತ್ತು. ಅವರು ರೈತರಿಂದ ತೆರಿಗೆ ಸಂಗ್ರಹಿಸಿ ತಮ್ಮ ಸೇನೆಯ ನಿರ್ವಹಣೆ ಮಾಡುತ್ತಿದ್ದರು, ಉಳಿದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತಿದ್ದರು.

ಮೊಘಲರ ಕಾಲದಲ್ಲಿ ಕಂದಾಯ ವಸೂಲಿ ಕಾರ್ಯವನ್ನು ಗ್ರಾಮದ ಮುಖ್ಯಸ್ಥರಾದ ನವಾಬರು, ಸುಬೇದಾರರು, ಮಾಂಡಲೀಕರು ಮೊದಲಾದವರಿಗೆ ವಹಿಸಿಕೊಡಲಾಗಿತ್ತು. ಇಲ್ಲಿ ಒಂದು ವ್ಯವಸ್ಥಿತ ಭೂ ಕಂದಾಯ ಪದ್ಧತಿಯನ್ನು ಶೇರ್ ಶಹಾ ತಂದಿದ್ದನು ಮತ್ತು ಅಕ್ಬರನು ತನ್ನ ಆಡಳಿತದ ಅವಧಿಯಲ್ಲಿ ಅದನ್ನು ಉತ್ತಮವಾಗಿ ಕಾರ್ಯಗತಗೊಳಿಸಿದನು. ಪ್ರಮುಖವಾಗಿ ಅಕ್ಬರನು ತನ್ನ ಕಂದಾಯ ಮಂತ್ರಿಯಾದ ತೋದರಮಲ್ಲನ ನೇತೃತ್ವದಲ್ಲಿ ಜಾರಿಗೆ ತಂದ ಬಂದೋಬಸ್ತ್ ಪದ್ಧತಿ ಬಹಳ ಪ್ರಮುಖವಾದದ್ದು.

ಇನ್ನೊಂದು ಪ್ರಮುಖವಾದ ಪದ್ಧತಿ ಜಾಗೀರ್ ವ್ಯವಸ್ಥೆ. ಅಧಿಕಾರಿಗಳಿಗೆ, ಸೇನಾನಾಯಕರಿಗೆ ಸಂಬಳದ ಬದಲಾಗಿ ಜಾಗೀರ್ (ಆದಾಯದ ಹಕ್ಕು) ನೀಡಲಾಗುತ್ತಿತ್ತು. ಜಾಗೀರ್‌ದಾರರು ರೈತರಿಂದ ತೆರಿಗೆ ಸಂಗ್ರಹಿಸುತ್ತಿದ್ದರು, ಆದರೆ ಜಮೀನು ಅವರ ಖಾಸಗಿ ಸ್ವತ್ತು ಆಗಿರಲಿಲ್ಲ.

ಮತ್ತೊಂದು ಪ್ರಮುಖ ಪದ್ಧತಿ ಎಂದರೆ ಜಮೀನ್ದಾರಿ ಪದ್ಧತಿ. ಈ ಅವಧಿಯಲ್ಲಿಯೇ ಜಮೀನ್ದಾರಿ ಪದ್ಧತಿಯು ಹುಟ್ಟಿಕೊಂಡು ಮುಂದೆ ಅದು ಉತ್ತರ ಭಾರತದ ಪ್ರಮುಖ ಭೂ ಹಿಡುವಳಿ ಪದ್ಧತಿಯಾಗಿ ಬೆಳೆಯಿತು. ಮೊಘಲ ದೊರೆ ಫಾರೂಕ್ ಸಿಯಾರನ ಆಡಳಿತದ ಅವಧಿಯಲ್ಲಿ ಖಚಿತವಾಗಿ ರೂಪಗೊಂಡಿತು. ಸ್ವಲ್ಪ ಕಾಲದ ನಂತರ ಕಂದಾಯ ವಸೂಲಿ ಹಕ್ಕನ್ನು ಹರಾಜು ಹಾಕುವ ಪದ್ಧತಿ ಜಾರಿಗೆ ಬಂದಿತು. ಜಮೀನ್ದಾರರು ಮಧ್ಯವರ್ತಿಗಳಾಗಿ ರೈತರಿಂದ ತೆರಿಗೆ ಸಂಗ್ರಹಿಸಿ ರಾಜ್ಯಕ್ಕೆ ಕಳುಹಿಸುತ್ತಿದ್ದರು. ರೈತರು ನೇರವಾಗಿ ಜಮೀನ್ದಾರರ

ನಿಯಂತ್ರಣಕ್ಕೆ ಒಳಪಟ್ಟರು.

ಮಧ್ಯಕಾಲೀನ ದಕ್ಷಿಣ ಭಾರತದಲ್ಲಿ ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಪಲ್ಲವ, ಚೋಳ, ಯಾದವ, ಕಾಕತೀಯ, ಹೊಯ್ಸಳ–ವಿಜಯನಗರ ಕಾಲದಲ್ಲಿ ಭೂಮಿಯನ್ನು ರಾಜ್ಯ, ದೇವಾಲಯಗಳು, ಬ್ರಾಹ್ಮಣ ಅಗ್ರಹಾರಗಳು ಹಾಗೂ ಸೈನಿಕ ಅಧಿಕಾರಿಗಳು ಹಿಡಿದುಕೊಂಡಿದ್ದರು.

ಬ್ರಾಹ್ಮಣರಿಗೆ ನೀಡುವ ದತ್ತಿ ಭೂಮಿಯನ್ನ ಬ್ರಹ್ಮದೇವ ಭೂಮಿ, ದೇವಾಲಯಗಳಿಗೆ ನೀಡುವ ಭೂಮಿಯನ್ನ ದೇವದಾನ ಭೂಮಿ, ಬ್ರಾಹ್ಮಣರಿಗೆ ಕಂದಾಯ ರಹಿತವಾಗಿ ನೀಡುವ ಭೂಮಿಯನ್ನು ಅಥವಾ ಗ್ರಾಮವನ್ನು ಅಗ್ರಹಾರಗಳು ಎಂದು ಕರೆಯುವ ವ್ಯವಸ್ಥೆ ಜಾರಿಯಲ್ಲಿತ್ತು. ಜಮೀನು ಹಕ್ಕುಗಳನ್ನು ಸೈನಿಕರು, ಅಧಿಕಾರಿಗಳಿಗೆ ಸಂಬಳ ರೂಪದಲ್ಲಿ ನೀಡಲಾಗುತ್ತಿತ್ತು. ಹೊಯ್ಸಳ ಕಾಲದಲ್ಲಿ ಅಗ್ರಹಾರ ಗ್ರಾಮಗಳು ಬಲಿಷ್ಠವಾಗಿ ಬೆಳೆಯುತ್ತ, ಬ್ರಾಹ್ಮಣರು ತಮ್ಮ ಆಡಳಿತ ನಡೆಸುತ್ತಿದ್ದರು. ರೈತರು ಭೂಮಿಯ ನಿಜವಾದ ಶ್ರಮಿಕರಾಗಿದ್ದರೂ, ಭೂ ಸ್ವಾಮ್ಯ ಹೆಚ್ಚಾಗಿ ರಾಜ, ದೇವಾಲಯ ಅಥವಾ ಬ್ರಾಹ್ಮಣರ ಕೈಯಲ್ಲಿತ್ತು. ಭಾರತದ ಭೂ ಹಿಡುವಳಿ ವ್ಯವಸ್ಥೆ ಎಂದರೆ ರಾಜನ ಪರಮಾಧಿಕಾರದಡಿಯಲ್ಲಿ ನಡೆದು, ಕ್ರಮೇಣ ಧಾರ್ಮಿಕ ಸಂಸ್ಥೆಗಳು, ಬ್ರಾಹ್ಮಣರು, ದೇವಾಲಯಗಳು ಹಾಗೂ ಅಧಿಕಾರಿಗಳ ಪಾಲಾಯಿತು.

ವಿಜಯನಗರ ರಾಜರು ಸೇನಾನಾಯಕರಿಗೆ ಭೂಮಿ ನೀಡುತ್ತಿದ್ದರು, ಇದನ್ನು ಅಮರ ನಾಯಕ ಪದ್ಧತಿ ಎಂದು ಕರೆಯಲಾಗುತ್ತಿತ್ತು. ಅವರು ಭೂಮಿಯಿಂದ ಆದಾಯ ಸಂಗ್ರಹಿಸಿ ಸೇನೆ ನಿರ್ವಹಿಸುತ್ತಿದ್ದರು, ಯುದ್ಧಕಾಲದಲ್ಲಿ ರಾಜನಿಗೆ ಸೈನ್ಯ ಒದಗಿಸುತ್ತಿದ್ದರು. ಕನ್ನಡ ನಾಡಿನ ಕೆಳದಿ ನಾಯಕರ ಪ್ರಸಿದ್ಧ ದೊರೆಯಾದ ಶಿವಪ್ಪ ನಾಯಕ ಜಾರಿಗೆ ತಂದಂತಹ ಕಂದಾಯ ಪದ್ಧತಿಯಾದ ಶಿವಪ್ಪ ನಾಯಕನ ಶಿಸ್ತನ್ನು ಇಲ್ಲಿ ನಾವು ಸ್ಮರಿಸಬಹುದು.

**ಆಧುನಿಕ ಭಾರತದ ಭೂ ಹಿಡುವಳಿ ವ್ಯವಸ್ಥೆ**

ಮೊಘಲರ ಆಡಳಿತದ ಅವನತಿಯೊಂದಿಗೆ ನಮ್ಮ ದೇಶದಲ್ಲಿ ವಸಾಹತುಶಾಹಿ ಆಡಳಿತ ಪ್ರಾರಂಭವಾಯಿತು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸ್ಥಾಪನೆಯು ಮೊಗಲ್ ಭೂ ಪದ್ಧತಿಯನ್ನು ಸಂಪೂರ್ಣವಾಗಿ ಬದಲಿಸಿತು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಭಾರತದಲ್ಲಿಯ ಸಾಮ್ರಾಜ್ಯಗಳನ್ನು ಒಂದೊಂದಾಗಿ ತನ್ನ ನಿಯಂತ್ರಣದಲ್ಲಿ ತೆಗೆದುಕೊಂಡು ಸಾಂಪ್ರದಾಯಿಕ ಭೂ ಒಡೆತನ ಪದ್ಧತಿಯನ್ನು ಕಿತ್ತುಹಾಕಿತು.

1757 ಪ್ಲಾಸಿಯ ಯುದ್ಧದ ನಂತರ ಭಾರತದಲ್ಲಿ ಇಂಗ್ಲೀಷರ ಆರ್ಥಿಕ ನೀತಿ ಜಾರಿಗೆ ಬಂದು, ಕೃಷಿ ಭೂಮಿಯಿಂದ ಹೆಚ್ಚಿನ ಆದಾಯ ಪಡೆಯಲು ವಿವಿಧ ರೀತಿಯ ಭೂಮಿಯ ಹಿಡುವಳಿ ವ್ಯವಸ್ಥೆಗಳು ಜಾರಿಗೆ ಬಂದವು. ಬಕ್ಸಾರ್ ಕದನದ ನಂತರ ಮೊಗಲ್ ದೊರೆ ಎರಡನೆಯ ಷಾ ಆಲಂ ನಿಂದ ಈಸ್ಟ್ ಇಂಡಿಯಾ ಕಂಪನಿಯು ಅಲಹಾಬಾದ್ ಒಪ್ಪಂದದ ಮೂಲಕ ದಿವಾನಿ ಹಕ್ಕನ್ನು ಪಡೆದ ನಂತರ ಬಂಗಾಳದ ಗೌರ್ನರ್ ರಾಬರ್ಟ್ ಕ್ಲೈವ್ ಭೂ ಕಂದಾಯವನ್ನು ಸಂಗ್ರಹಿಸುವ ಪ್ರಚಲಿತ ವ್ಯವಸ್ಥೆಯನ್ನು ಮುಂದುವರಿಸಿದನು, ಆದರೆ ಅದು ಫಲಕಾರಿ ಆಗಲಿಲ್ಲ. ನಂತರ ಬಂದ ಬಂಗಾಳದ ಗೌರ್ನರ್ ಜನರಲ್ ವಾರನ್ ಹೇಸ್ಟಿಂಗ್ ದೇಶದ ಎಲ್ಲಾ ಭೂಮಿಯು ಪ್ರಭುತ್ವದ ಅಧಿಕಾರಕ್ಕೆ ಒಳಪಟ್ಟಿದ್ದು ಎಂಬ ಸಿದ್ಧಾಂತವನ್ನು ಒತ್ತಿ ಹೇಳಿ, ಭೂಮಿಯನ್ನ ಮುಕ್ತ ಮಾರುಕಟ್ಟೆಯಲ್ಲಿ ಹರಾಜು ಹಾಕುವ ವ್ಯವಸ್ಥೆಯನ್ನು ಆರಂಭಿಸಿದನು.

ವಾರನ್ ಹೇಸ್ಟಿಂಗ್ ನಂತರ ಆಗಮಿಸಿದ ಲಾರ್ಡ್ ಕಾರ್ನ್ ವಾಲೀಸ್ ಭೂ

ಹಿಡುವಳಿ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆಗಳನ್ನ ಜಾರಿಗೆ ತಂದನು. ಅದನ್ನು ನಾವು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯುತ್ತೇವೆ. 20ನೇ ಶತಮಾನದ ಆರಂಭದಲ್ಲಿ ಭಾರತದ ವೈಸ್ರಾಯ್ ಲಾರ್ಡ್ ಕರ್ಜನ್ ಕೃಷಿ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತರಲು ಪ್ರಯತ್ನಿಸಿದನು. ಕೃಷಿಕರ ಕಲ್ಯಾಣಕ್ಕಾಗಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸಿದನು. ಬ್ರಿಟಿಷರ ಕಾಲದಲ್ಲಿ ಭಾರತದಲ್ಲಿದ್ದ ಪ್ರಮುಖ ಭೂ ಹಿಡುವಳಿ ಪ್ರಕಾರಗಳು ಮೊಘಲರ ಆಳ್ವಿಕೆಯ ಅಂತ್ಯದ ವೇಳೆಗೆ ಹಾಗೂ ಬ್ರಿಟಿಷರ ಆಳ್ವಿಕೆಯ ಪ್ರಾರಂಭದ ಹೊತ್ತಿಗೆ ಭಾರತದ ರಾಜರು ಅನುಸರಿಸುತ್ತಿದ್ದ ಭೂಸ್ವಾಮಿತ್ವದ ಪದ್ಧತಿಗಳು ಸಂಪೂರ್ಣವಾಗಿ ಕಣ್ಮರೆಯಾಗಿ ಹೊಸ ಹೊಸ ಪದ್ಧತಿಗಳು ಆಚರಣೆಗೆ ಬಂದವು. ಅವುಗಳಲ್ಲಿ ಪ್ರಮುಖವಾದವುಗಳು:

- ಖಾಯಂ ಜಮೀನ್ದಾರಿ ಪದ್ಧತಿಯನ್ನು 1793 ರಲ್ಲಿ ಲಾರ್ಡ್ ಕಾರ್ನ್ ವಾಲಿಸ್ ನು ಬಂಗಾಳದಲ್ಲಿ ಜಾರಿಗೆ ತಂದನು. ಜಮೀನ್ದಾರರು ರೈತರಿಂದ ತೆರಿಗೆ ಸಂಗ್ರಹಿಸಿ ಬ್ರಿಟಿಷರಿಗೆ ಪಾವತಿಸುತ್ತಿದ್ದರು.
- ರೈತವಾರಿ ಪದ್ಧತಿಯನ್ನು 1820 ರಲ್ಲಿ ಮೊದಲಿಗೆ ಮದ್ರಾಸ್ ಮತ್ತು ಬಾಂಬೆ ಪ್ರಾಂತ್ಯದಲ್ಲಿ ಥಾಮಸ್ ಮನ್ರೋ ಜಾರಿಗೆ ತಂದನು. ರೈತನೇ ನೇರವಾಗಿ ಸರ್ಕಾರಕ್ಕೆ ತೆರಿಗೆ ಕಟ್ಟುವನು. ರೈತನನ್ನು ಭೂಮಿಯ ಸ್ವಾಮಿಯಾಗಿ ಪರಿಗಣಿಸಲಾಯಿತು.
- ಮಹಲ್‌ವಾರ್ ಪದ್ಧತಿಯು ಉತ್ತರ ಭಾರತದಲ್ಲಿ (ಉತ್ತರ ಪ್ರದೇಶ, ಪಂಜಾಬ್, ಮಧ್ಯ ಪ್ರದೇಶ) ಜಾರಿಗೆ ಬಂದಿತು. "ಮಹಲ್" (ಗ್ರಾಮ ಸಮುದಾಯ) ಒಟ್ಟಿಗೆ ತೆರಿಗೆ ಕಟ್ಟಬೇಕಾಗಿತ್ತು. ಗ್ರಾಮ ಪಂಚಾಯಿತಿ ಅಥವಾ ಸಮೂಹದ ಮುಖಂಡರು (ಲಂಬಾರ್ದಾರ್) ತೆರಿಗೆ ಸಂಗ್ರಹಿಸಿ ಸರ್ಕಾರಕ್ಕೆ ಪಾವತಿಸುತ್ತಿದ್ದರು.

ಈ ಮೇಲಿನ ಭೂ ಹಿಡುವಳಿ ಪದ್ಧತಿಗಳಿಂದ ಭಾರತೀಯ ರೈತರ ಮೇಲೆ ಹಾನಿಕಾರಕ ಪರಿಣಾಮಗಳು ಬೀರಿದವು. ರೈತರು ಭೂಮಿಯ ನಿಜವಾದ ಸ್ವಾಮ್ಯ ಕಳೆದುಕೊಂಡರು. ಜಮೀನ್ದಾರರು, ಮಧ್ಯವರ್ತಿಗಳು ಶ್ರೀಮಂತರಾದರೆ, ರೈತರು ಸಾಲದಲ್ಲಿ ಮುಳುಗಿದರು. ವಾಣಿಜ್ಯ ಬೆಳೆಗಳು (ಕಾಫಿ, ಹತ್ತಿ, ನೀಲಿ, ಅಫೀಮು) ಬೆಳೆಸುವ ಒತ್ತಡವಾಯಿತು. ಗ್ರಾಮೀಣ ಆರ್ಥಿಕತೆ ಶೋಷಿತವಾಯಿತು, ಹಸಿವು–ಬರಗಾಲಗಳು ಹೆಚ್ಚಾದವು. ಇದರಿಂದ ರೈತ ಚಳುವಳಿಗಳು ಉಂಟಾದವು.

**ಸ್ವಾತಂತ್ರ್ಯಾನಂತರದ ಭಾರತದ ಭೂ ಹಿಡುವಳಿ ವ್ಯವಸ್ಥೆ:**

1947ರಲ್ಲಿ ಭಾರತ ಸ್ವತಂತ್ರವಾದ ನಂತರ ರೈತರನ್ನು ಶೋಷಣೆಯಿಂದ ಮುಕ್ತಗೊಳಿಸಿ, ಅವರಿಗೆ ನಿಜವಾದ ಭೂ ಸ್ವಾಮ್ಯ ನೀಡುವ ಉದ್ದೇಶದಿಂದ ಜಾರಿಗೆ ತಂದ ಭೂ ಸುಧಾರಣೆಗಳು ಭಾರತದಲ್ಲಿ ಜಮೀನ್ದಾರಿ, ಇನಾಮ್ದಾರಿ, ಜಾಗೀರುದಾರಿ ಪದ್ಧತಿಗಳನ್ನು ರದ್ದು ಮಾಡಿದವು. ಭಾರತದಲ್ಲಿ 1950–1970 ರ ಅವಧಿಯಲ್ಲಿ ಜಾರಿಗೆ ಬಂದ ಕಾನೂನುಗಳಿಂದ ಈ ಮಧ್ಯವರ್ತಿತನ ಸಂಪೂರ್ಣ ರದ್ದುಗೊಳಿಸಲಾಯಿತು. ರೈತರೇ ಭೂಮಿಯ ಪ್ರತ್ಯಕ್ಷ ಸ್ವಾಮಿಗಳು ಆದರು.

ಶ್ರೀಮಂತ ಭೂ ಸ್ವಾಮಿಗಳು ಸಾವಿರಾರು ಎಕರೆ ಭೂಮಿಯನ್ನು ಹಿಡಿದುಕೊಂಡಿದ್ದರು. ರಾಜ್ಯ ಸರ್ಕಾರಗಳು ಕಾಯ್ದೆಗಳನ್ನು ಜಾರಿಗೆ ತಂದವು. ಒಬ್ಬ ವ್ಯಕ್ತಿ ಅಥವಾ ಕುಟುಂಬ ಹಿಡಿದುಕೊಳ್ಳಬಹುದಾದ ಭೂಮಿಗೆ ಗರಿಷ್ಠ ಮಿತಿ ನಿಗದಿ ಪಡಿಸಿ ಭೂಮಿಯ ಮಿತಿಗೊಳಿಕೆಯನ್ನು ಜಾರಿಗೆ ತಂದಿತು. ಆ ಮಿತಿಗಿಂತ ಹೆಚ್ಚು ಭೂಮಿ ಇದ್ದರೆ, ಅದನ್ನು ಸರ್ಕಾರ ವಶಪಡಿಸಿಕೊಂಡು ಭೂಹೀನ ರೈತರಿಗೆ ಹಂಚಿಕೆ ಮಾಡಲಾಯಿತು. ಸ್ವತಃ ಜಮೀನಿಲ್ಲದೆ

ಇತರರ ಜಮೀನಿನಲ್ಲಿ ಕೃಷಿ ಮಾಡುವ ರೈತರ ಶೋಷಣೆ ತೀವ್ರವಾಗಿತ್ತು. ಸ್ವಾತಂತ್ರ್ಯನಂತರ ಕಾನೂನುಗಳ ಮೂಲಕ ಬಾಡಿಗೆ ರೈತರನ್ನು ಹೊರಹಾಕುವುದನ್ನು ನಿಷೇಧ ಮಾಡಿ ಅವರಿಗೆ ಕೃಷಿ ಮಾಡುವ ಹಕ್ಕನ್ನು ನೀಡಲಾಯಿತು.

ಭೂದಾನ ಚಳುವಳಿ (ವಿನೋಬಾ ಭಾವೆ), ಸರಕಾರಿ ಅರಣ್ಯ/ಗೋಮಾಳ ಜಮೀನುಗಳನ್ನು ಭೂಹೀನರಿಗೆ ಹಂಚಿಕೆ ಮಾಡಲಾಯಿತು. ಇದರಿಂದ ಗ್ರಾಮೀಣ ಬಡವರ ಜೀವನಮಟ್ಟ ಸುಧಾರಿಸಲು ಪ್ರಯತ್ನ ಮಾಡಲಾಯಿತು. 1960ರ ಹಸಿರುಕ್ರಾಂತಿಯ ನಂತರ ಭಾರತದಲ್ಲಿ ಭೂ ಸುಧಾರಣೆಗಳ ಜೊತೆ, ಹಸಿರು ಕ್ರಾಂತಿಯು (ಆಧುನಿಕ ತಂತ್ರಜ್ಞಾನ, ರಸಗೊಬ್ಬರ, ನೀರಾವರಿ) ಜಾರಿಯಾದಾಗ, ರೈತರು ಸ್ವತಃ ಸ್ವಾಮ್ಯ ಹೊಂದಿದ ಭೂಮಿಯಲ್ಲಿ ಆಧುನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಂಡರು.

ಪ್ರಸ್ತುತವಾಗಿ ಭಾರತದಲ್ಲಿ ಭೂ ಸುಧಾರಣೆಗಳಿಂದ ಮಧ್ಯವರ್ತಿತನ ಬಹುತೇಕ ಅಳಿಯಿತು. ಆದರೆ ಭೂಮಿಯ ಅಸಮಾನ ಹಂಚಿಕೆ, ಸಣ್ಣ ಜಮೀನುಗಳ ಒಡೆತನ, ಭೂ ಸಾಧನಗಳ ಕೊರತೆ ಇನ್ನೂ ಸಮಸ್ಯೆಗಳಾಗಿವೆ. ಸರ್ಕಾರ ಇಂದು ಭೂಹೀನ ರೈತರಿಗೆ ಹಕ್ಕುಪತ್ರ, ಆಧಾರ್–ಜಮಾಬಂದಿ ಡಿಜಿಟಲೀಕರಣ, PM–KISAN, ಭೂ ಬ್ಯಾಂಕ್ ಮುಂತಾದ ಯೋಜನೆಗಳ ಮೂಲಕ ರೈತರ ಹಕ್ಕುಗಳನ್ನು ಬಲಪಡಿಸುತ್ತಿದೆ.

**ಪರಾಮರ್ಶನ ಗ್ರಂಥಗಳು:**


1. Kosambi DD. An Introduction to the Society of Indian History. Diamond Publications.
2. Baden Powell BH. The Land System of British India. Oxford University Press.
3. Sharma RS. Indian Feudalism. Oxford University Press.
4. Singh U. A History of Ancient and Early Medieval India. Chirag Publications.
5. ಸದಾಶಿವ K. ಸಮಗ್ರ ಭಾರತದ ಇತಿಹಾಸ. ಪುಸ್ತಕ ಪ್ರಕಾಸನ, ಮೈಸೂರು.
6. K N A. ಸಮಗ್ರ ಭಾರತದ ಇತಿಹಾಸ. ಸ್ವಪ್ನ ಬುಕ್ ಹೌಸ್, ಬೆಂಗಳೂರು.
7. Chandra B. ಸ್ವಾತಂತ್ರ್ಯೋತ್ತರ ಭಾರತ. ನವ ಕರ್ನಾಟಕ ಪ್ರಕಾಶನ, ಬೆಂಗಳೂರು.
8. ಚಿದಾನಂದಮೂರ್ತಿ M. ಭಾರತದ ಸಾಂಸ್ಕೃತಿಕ ಇತಿಹಾಸ. ಸ್ವಪ್ನ ಬುಕ್ ಹೌಸ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.